2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 185/2022</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಜಯಮ್ಮ | ಪಿಡಬ್ಲೂ - 02 |
| ಗಂಡನ ಹೆಸರು | - | ಹೊನ್ನಪ್ಪಗೌಡ | ಸಿಡಬ್ಲೂ - 02 |
| ವಯಸ್ಸು | - | 68 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಆಗಳ ಗ್ರಾಮ | |

ದಿನಾಂಕಃ **19.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಸಂಬಂಧಿಕರು. ಚಾಸಾ.1 ಮತ್ತು 3 ನನ್ನ ಮಕ್ಕಳು. ನನಗೆ ಚಾಸಾ.4 ರಿಂದ 6 ರವರ ಪರಿಚಯ ಇದೆ.

2. ನಮ್ಮ ಕುಟುಂಬ ಮತ್ತು ಆರೋಪಿತರ ಕುಟುಂಬ ಆಗಳ ಗ್ರಾಮ, ಹಂಗರವಳ್ಳಿ ಅಂಚೆ ಇಲ್ಲಿ ಅಕ್ಕಪಕ್ಕದಲ್ಲಿ ವಾಸವಿರುತ್ತೇವೆ. ನಮ್ಮ ತೋಟಗಳು ಸಹ ಅಕ್ಕಪಕ್ಕದಲ್ಲಿರುತ್ತವೆ. ನಮ್ಮ ಹಾಗೂ ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿತರು ನಮ್ಮ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿ, ನನಗೆ, ಚಾಸಾ.1 ಮತ್ತು 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕತ್ತಿ ಮತ್ತು ಆಯುಧಗಳಿಂದ ಹಲ್ಲೆ ಮಾಡಿ ನಮ್ಮ ಬಟ್ಟೆಗಳನ್ನು ಹರಿದು ನಮ್ಮ ಮಾನಕ್ಕೆ ಧಕ್ಕೆ ಉಂಟು ಮಾಡಿರುವುದಿಲ್ಲ. ಚಾಸಾ.1 ರವರು ಆರೋಪಿತರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

3. ದಿಃ 25.09.2020 ರಂದು ಮಾನ್ಯ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಚಿಕ್ಕಮಗಳೂರು ಇವರ ಸಮಕ್ಷಮ ನಾನು ನಮ್ಮ ಜಮೀನಿನ ವಿಚಾರವಾಗಿ ಹೇಳಿಕೆ ನೀಡಿದ್ದೇನೆ. ಸದರಿ ಹೇಳಿಕೆಯಲ್ಲಿ ಸಾಕ್ಷಿ

ತನ್ನ ಸಹಿ ನೋಡಿ ಗುರುತಿಸಿದ್ದು ಹೇಳಿಕೆಯನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 07.05.2020 ರಂದು ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ನಾನು ದಿಃ 23.03.2020 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನಮ್ಮ ಕಾಫಿತೋಟಕ್ಕೆ ನಾನು, ಚಾಸಾ.1 ಮತ್ತು ಕೂಲಿ ಕಾರ್ಮಿಕರೊಂದಿಗೆ ಮೆಣಸು ಕುಯ್ಯಲು ಹೋಗಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬೆಳಿಗ್ಗೆ 10.30 ಗಂಟೆಗೆ ಪ್ರಕರಣದ ಆರೋಪಿತರು ನಮ್ಮ ಕಾಫಿ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿ ನಮ್ಮ ಕಾಫಿ ಗಿಡಗಳನ್ನು ಕತ್ತಿಯಿಂದ ಕಡಿದು ಹಾಳು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಇದನ್ನು ನೋಡಿದ ನಾನು ಹಾಗೂ ಚಾಸಾ.1 ರವರು ಸೇರಿ ಆರೋಪಿತರನ್ನು ಪ್ರಶ್ನಿಸಿದಾಗ ಆರೋಪಿತರು ನಮಗೆ ಸೂಳೆ ಮುಂಡೇ ಎಂದು ಅವಾಚ್ಯವಾಗಿ ಬೈದು ಈ ದಿನ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಹಾಗೂ ಗತಿ ಕಾಣಿಸುತ್ತೇವೆ ಎಂದು ನುಡಿಯುತ್ತಾ, ಏಕಾಏಕಿ ಕತ್ತಿಯಿಂದ ಕಡಿಯಲು ಬಂದಾಗ ಚಾಸಾ.1 ರವರು ತನ್ನ ಕೈ ಅಡ್ಡಕೊಟ್ಟಿದ್ದು ಸದರಿ ಕತ್ತಿ ಪೆಟ್ಟು ಚಾಸಾ.1 ರವರ ಎಡಗೈ ಹಸ್ತಕ್ಕೆ ಬಲವಾಗಿ ಬಿದ್ದು ರಕ್ತಗಾಯ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ.1 ರವರನ್ನು ಬಿಡಿಸಲು ಬಂದ ನನಗೂ ಸಹ

1 ನೇ ಆರೋಪಿ ಮಹೇಶನು ತನ್ನ ಬಳಿ ಇದ್ದ ಕತ್ತಿಯಿಂದ ನನ್ನ ಕೈಗೆ ಮತ್ತು ಎಡಗಾಲಿಗೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ.

5. ಅಷ್ಟರಲ್ಲಿ 2 ನೇ ಆರೋಪಿ 1 ನೇ ಆರೋಪಿಯ ಕೈಯಿಂದ ಕತ್ತಿಯನ್ನು ಕಿತ್ತುಕೊಂಡು ನನ್ನ ತಲೆಗೆ ಕಡಿದು ರಕ್ತಗಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯನ್ನು ನೋಡಿ ಚಾಸಾ.3 ರವರು ಜಗಳ ಬಿಡಿಸಲು ಬಂದಾಗ 2 ನೇ ಆರೋಪಿ ಚಾಸಾ.3 ರವರ ಎದೆಯನ್ನು ಹಿಡಿದು ತಳ್ಳಿ ಕೆಳಗೆ ಬೀಳಿಸಿ ಕಾಲಿನಿಂದ ಹೊಟ್ಟೆಗೆ ಒದ್ದು ಕೆಳಗೆ ಬೀಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿತನು ತನ್ನ ಆಟೋದಿಂದ ಒಂದು ರಾಡನ್ನು ತೆಗೆದುಕೊಂಡು ಚಾಸಾ.3 ರವರಿಗೆ ಹಲ್ಲೆ ಮಾಡಿ ರಕ್ತಗಾಯ ಮಾಡಿ ಮತ್ತು ಅದೇ ರಾಡಿನಿಂದ ಮೈಕೈಗೆ ಹೊಡೆದು ನೋವುಂಟುಮಾಡಿರುತ್ತಾನೆ ಎಂದರೆ ಸರಿಯಲ್ಲ. ಅದೇ ವೇಳೆಗೆ 2 ನೇ ಆರೋಪಿ ತನ್ನ ಹೆಂಡತಿಯಾದ 3 ನೇ ಆರೋಪಿತಳ ಕೈಯಲ್ಲಿದ್ದ ಕತ್ತಿಯಿಂದ ಚಾಸಾ.1 ರವರ ಬಲಗೈಗೆ ಹೊಡೆದು ರಕ್ತಗಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ 4 ನೇ ಆರೋಪಿತಳು ಚಾಸಾ.1 ರವರಿಗೆ ಕೈಗಳಿಂದ ಹೊಡೆದು ಅವರ ಎಡಗೈ ತೋಳಿಗೆ ಹಲ್ಲಿನಿಂದ ಕಚ್ಚಿ ರಕ್ತಗಾಯ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನಂತರ ಎಲ್ಲಾ ಆರೋಪಿತರು ಸೇರಿ ನಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಅಲ್ಲಿಂದ ಹೊರಟು ಹೋಗಿರುತ್ತಾರೆ ಎಂದರೆ ಸರಿಯಲ್ಲ.

6. ಈ ಬಗ್ಗೆ ನಾನು ಈಗ ಓದಿ ಹೇಳಿದ ನಿಪಿ.7 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

7. ನಂತರ ದಿಃ 25.09.2020 ರಂದು ನ್ಯಾಯಾಧೀಶರ ಮುಂದು ನಿಪಿ.6 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

8. ನಾವು ಮತ್ತು ಆರೋಪಿತರು ಈಗ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ)

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ